

# ಕರ್ನಾಟಕದ ದೇವಘಾಟ್

ತುಂಗಭದ್ರಾ ನದಿ ದಂಡೆಯ ಗುಡ್ಡವೊಂದರ ಮೇಲಿರುವ ದೇವಘಾಟ್, ಇತಿಹಾಸ ಮತ್ತು ಪುರಾಣಗಳೊಂದಿಗೆ ಮಿಳಿತಗೊಂಡಿರುವ ಸ್ಥಳ. ತುಂಗಭದ್ರಾ ಮೈದುಂಬಿಕೊಂಡಿರುವ ಸಂದರ್ಭದಲ್ಲಿ ದೇವಘಾಟ್ ನೋಡಲು ಬರುವವರ ಸಂಖ್ಯೆಯೂ ಹೆಚ್ಚಿದೆ.

■ ಮಲ್ಲಿಕಾರ್ಜುನ ಹೊಸಪಾಳ್ಯ



ಕಾಲುವೆಯ ಪ್ರಾಚೀನ ಕಟ್ಟಡ

ವಿಶಾಲ ತುಂಗಭದ್ರಾ ನದಿ, ಅದರ ಪಕ್ಕದಲ್ಲಿ ಹರಿಯುವ ಜೋಡಿ ಕಾಲುವೆಗಳು, ಅಲ್ಲಿನ ಗುಡ್ಡದ ನಡುವೆ ಸಾವಿರ ವರ್ಷಗಳ ಪ್ರಾಚೀನ ಸ್ಮಾರಕಗಳ ಸಂಕೀರ್ಣ. ಇವಿಷ್ಟೂ ಒಂದೇ ಕಡೆ ಇರುವ ಪುಟ್ಟ ಸ್ಥಳವೇ ದೇವಘಾಟ್.

ದೇವಘಾಟ್ ಹೆಸರು ಕೇಳಿದರೆ ದೂರದ ಮಹಾರಾಷ್ಟ್ರ ಅಥವಾ ರಾಜಸ್ಥಾನದ ಕೋಟೆ ಎನಿಸುತ್ತದೆ. ಆದರೆ ಇದು ಗಂಗಾವತಿ ಪಟ್ಟಣದಿಂದ ಕೇವಲ 3 ಕಿ.ಮೀ. ದೂರದಲ್ಲಿರುವ ಪುಟ್ಟ ಸ್ಥಳ. ತುಂಗಭದ್ರಾ ನದಿ ದಡದಲ್ಲಿನ ಸಣ್ಣ ಕುರುಚಲು ಗುಡ್ಡವೊಂದರ ನಡುಭಾಗದಲ್ಲಿದೆ. ಇಲ್ಲಿ ಹಲವು ಪ್ರಾಚೀನ ಸ್ಮಾರಕಗಳಿವೆ. ಅವುಗಳಲ್ಲಿ ಅಮೃತೇಶ್ವರ ದೇವಾಲಯ, ಕಲ್ಲು ಕಂಬಗಳ ಮಂಟಪ, ಶಾಸನ, ಶಿವಲಿಂಗಗಳು ಪ್ರಮುಖವಾದವು. ನದಿ ಮತ್ತು ಸ್ಮಾರಕಗಳ ಮಧ್ಯೆ ಗುಡ್ಡದ ನಡುಭಾಗದಲ್ಲೇ ಎರಡು ನೀರಾವರಿ ಕಾಲುವೆಗಳು ಹಾದುಹೋಗುವುದು ಮತ್ತೊಂದು ವಿಶೇಷ.

ನದಿ ತುಂಬಿ ಹರಿವಾಗ ಆ ವೈಭವ ನೋಡಲು ಪ್ರವಾಸಿಗರು ಬರುತ್ತಾರೆ. ಉಳಿದ ದಿನ ಖಾಲಿ ಖಾಲಿ. ಅಕ್ಕಪಕ್ಕದಲ್ಲಿ ವ್ಯವಸಾಯ ಭೂಮಿಗಳಿವೆ. ಭತ್ತ, ಬಾಳೆಗಳ ನೋಟ ಇಲ್ಲಿಂದ ನೋಡಲು ಚೆನ್ನ. ಇಲ್ಲಿ ಜಮೀನುಳ್ಳ ರೈತರು ಆಗಾಗ ಬರುತ್ತಾರೆ. ಇಂತಹ ನಿರ್ಜನ ಪ್ರದೇಶವು ಇತಿಹಾಸದಲ್ಲಿ ಒಂದು ಉಪರಾಜಧಾನಿಯಾಗಿತ್ತು ಎಂದರೆ ನಂಬಲು ಕಷ್ಟ.

ನದಿಯ ಮತ್ತೊಂದು ಬದಿಯಲ್ಲಿರುವ ಕಂಪ್ಲಿ ಪಟ್ಟಣವು ಶತಮಾನಗಳ ಕಾಲ ಹಲವು ರಾಜಮನೆತನಗಳ ರಾಜಧಾನಿಯಾಗಿತ್ತು. ಅದೇ ಸಮಯದಲ್ಲಿ ದೇವಘಾಟ್ ಉಪರಾಜಧಾನಿಯಾಗಿ ಮೆರೆದಿತ್ತು. ಇಲ್ಲಿರುವ ಅಮೃತೇಶ್ವರ ದೇವಾಲಯ ಕಲ್ಯಾಣಿ ಚಾಲುಕ್ಯರ ಕಾಲದ್ದು. ಅಂದರೆ ಸಾವಿರ ವರ್ಷಗಳ ಇತಿಹಾಸ ಈ ಸ್ಥಳಕ್ಕಿದೆ. 'ಸ್ಕಂದ ಪುರಾಣ'ದಲ್ಲಿ ಈ ಪ್ರದೇಶವನ್ನು 'ದೇವಖಾತ' ಎಂದು ಕರೆಯಲಾಗಿದೆ. ಇಲ್ಲಿಂದ ಕಂಪ್ಲಿಯ ದಿಕ್ಕಿಗೆ ಸುಮಾರು ಒಂದು ಕಿ.ಮೀ. ಹೋದರೆ ಗದ್ದೆ ಬಯಲು, ಪ್ರಾಚೀನ ಕೋಟೆ ಗೋಡೆಗಳು, ಬುರುಜು, ದೇವಾಲಯಗಳನ್ನು ಕಾಣಬಹುದು.

ಕ್ರಿ.ಶ. 973ರಲ್ಲಿ (10ನೇ ಶತಮಾನ) ರಾಷ್ಟ್ರಕೂಟರ ಆಳ್ವಿಕೆ